# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

# C .C.No. 328/2022

| | | |
|---|---|---|
| **ಹೆಸರುಃ** | **ಕೃಷ್ಣಮೂರ್ತಿ** | **DW-1** |
| **ತಂದೆ/ಗಂಡ ಹೆಸರುಃ** | **ಲೇಟ್ ಮಂಜೇಗೌಡ** | |
| **ವಯಸ್ಸುಃ** | **52 ವರ್ಷ** | |
| **ವೃತ್ತಿಃ** | **ಶಿಕ್ಷಕರು** | |
| **ವಿಳಾಸಃ** | **ಮಾನ್ವಿ, ರಾಯಚೂರು** | **ದಿನಾಂಕಃ20-11-2025** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಕೆ ಕೆ ಎಂ ವಕೀಲರಿಂದ.**

ನನಗೆ ದೂರುದಾರರು ಪರಿಚಯವಿರುದಿಲ್ಲ. ನನ್ನ ಸಹ ಉದ್ಯೋಗಿಗಳಾದ ಮೋಹನ್ ಮತ್ತು ಸುಬ್ಬಯ್ಯ ರವರನ್ನು ನಾನು 1 ಲಕ್ಷ ಸಾಲ ಕೇಳಿದ್ದೆ. ಆಗ ಅವರು ತಮ್ಮ ಬಳಿ ಇರುವುದಿಲ್ಲ ಎಂದು ಹೇಳಿ ದೂರುದಾರರನ್ನು ಕೇಳಿ ಆನಂತರ ನನ್ನನ್ನು ಅವರ ಬಳಿ ಕರೆದುಕೊಂಡು ಹೋಗಿರುತ್ತಾರೆ. ಮೋಹನ್ ಮತ್ತು ಸುಬ್ಬಯ್ಯ ರವರು ದೂರುದಾರರ ಬಳಿ ನವೆಂಬರ್ 2019 ರಲ್ಲಿ ರೂ 50 ಸಾವಿರ ವನ್ನು ನನಗೆ ತೆಗೆದುಕೊಂಡಿರುತ್ತಾರೆ. ರೂ 50 ಸಾವಿರಗಳನ್ನು ಜನವರಿ 2020 ರಲ್ಲಿ ಮೋಹನ್ ಮತ್ತು ಸುಬ್ಬಯ್ಯ ರವರ ಸಮ್ಮುಖದಲ್ಲಿ ದೂರುದಾರರಿಂದ ಪಡೆದಿರುತ್ತೇನೆ. ಅದಕ್ಕೆ ಭದ್ರತೆಗಾಗಿ ನಾನು ನನ್ನ ಕೆನರಾ ಬ್ಯಾಂಕ್ ಮತ್ತು ಹೆಚ್ ಡಿ ಸಿ ಸಿ ಬ್ಯಾಂಕ್ ನ ಎರಡು ಚೆಕ್ ಗಳನ್ನು ನೀಡಿರುತ್ತೇನೆ. ನವೆಂಬರ್ 2020 ರಲ್ಲಿ ಮೋಹನ್ ಮತ್ತು ಸುಬ್ಬಯ್ಯ ರವರ ಸಮ್ಮುಖದಲ್ಲಿ ದೂರುದಾರರಿಗೆ ರೂ 50 ಸಾವಿರ ವನ್ನು ಹಿಂದಿರುಗಿಸಿರುತ್ತೇನೆ. ಉಳಿದ 50

ಸಾವಿರವನ್ನು ಜನವರಿ 2021 ರಲ್ಲಿ ಮೋಹನ್ ಮತ್ತು ಸುಬ್ಬಯ್ಯ ರವರ ಮೂಲಕ ದೂರುದಾರರಿಗೆ ಹಿಂದಿರುಗಿಸಿರುತ್ತೇನೆ. ಅದಕ್ಕೆ ರೂ 17,500/- ಬಡ್ಡಿಯನ್ನು ಕಟ್ಟಿರುತ್ತೇನೆ. ದೂರುದಾರರು ನನ್ನ ಕೆನರಾ ಬ್ಯಾಂಕ್ ಚೆಕ್ ನ್ನು ಮಾತ್ರ ವಾಪಸ್ಸು ನೀಡಿರುತ್ತಾರೆ. ಹೆಚ್ ಡಿ ಸಿ ಸಿ ಬ್ಯಾಂಕ್ ನ ಚೆಕ್ ಸಿಕ್ಕಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮೋಹನ್ ರವರಿಗೆ ಸದರಿ ವಿಚಾರ ತಿಳಿಸಿದಾಗ ಮೋಹನ್ ರವರು ಚೆಕ್ ನ್ನು ವಾಪಸ್ಸು ಕೊಡಿಸುತ್ತೇನೆಂದು ತಿಳಿಸಿದರು. ಆದ್ದರಿಂದ ನಾನು ಸುಮ್ಮನೆ ಇದ್ದೆ.

ನಂತರ ದೂರುದಾರರು ಸೆಪ್ಟೆಂಬರ್ 2021 ರಲ್ಲಿ ಚೆಕ್ ನ್ನು ಬ್ಯಾಂಕ್ ಗೆ ಹಾಕಿರುತ್ತಾರೆ. ಆನಂತರ ನ್ಯಾಯಾಲಯದಲ್ಲಿ ಈ ದೂರು ಸಲ್ಲಿಸಿದು ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು ದೂರುದಾರರಿಗೆ ಉತ್ತರ ನೋಟೀಸ್ ನೀಡಿರುತ್ತೇನೆ. ನನ್ನ ನೋಟೀಸ್ ನಲ್ಲಿ ಎಲ್ಲ ವಿಚಾರಗಳನ್ನು ತಿಳಿಸಿರುತ್ತೇನೆ. ನಾನು ಮೋಹನ್ ಮತ್ತು ಸುಬ್ಬಯ್ಯ ರವರನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ಮಾಡಿಸಬಲ್ಲೆ. ನಾನು ದೂರುದಾರರಿಗೆ ಯಾವುದೇ ಬಾಕಿ ಇರುವುದಿಲ್ಲ. ಆದ್ದರಿಂದ ಈ ಕೇಸನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**